ಸಾಲಿಯವರು ವಾರ್ಧಕ ಷಟ್ಪದಿಯಲ್ಲಿ ರಚಿಸಿದ ‘ಮುದ್ದಣ’ ಎಂಬ ಕವಿತೆಯನ್ನು ಮೆಚ್ಚಿ ಎ.ಆರ್. ಕೃಷ್ಣಶಾಸ್ತ್ರಿಯವರು ‘ಪ್ರಬುದ್ಧ ಕರ್ಣಾಟಕ’ದಲ್ಲಿ ಪ್ರಕಟಿಸಿದರು. ಆನಂತರ ಅವರ ಬಹಳಷ್ಟು ಕವನಗಳು ಉಡುಪಿಯ ‘ಸುವಾಸಿನಿ’ ಮತ್ತು ಧಾರವಾಡದ ‘ಜಯಕರ್ನಾಟಕ’ ಪತ್ರಿಕೆಗಳಲ್ಲಿ ಪ್ರಕಟವಾದುವು. ‘ಚಿಗುರೆಲೆ’ ಹೆಸರಿನ ಸಾಲಿಯವರ ಮೊದಲ ಕವನ ಸಂಗ್ರಹವನ್ನು ಬಾಗಲಕೋಟೆಯಲ್ಲಿ ‘ನವಜೀವನ’ ಪತ್ರಿಕೆ ನಡೆಸುತ್ತಿದ್ದ ಮಂಗಳವೇಢೆ ಶ್ರೀನಿವಾಸರಾಯರು ಪ್ರಕಟಿಸಿದ್ದರು (1925). ಭಾಮಿನಿ ಷಟ್ಪದಿಯಲ್ಲಿದ್ದ ಎಲ್ಲ ಒಂಬತ್ತು ಕವಿತೆಗಳಲ್ಲಿ ಕೊನೆಯದಾದ, ‘ಹಂಬಲು’, ‘ಮತ್ತೇನು ಬೇಡೆನು!’ ಎಂಬ ಶೀರ್ಷಿಕೆಯೊಂದಿಗೆ ಪ್ರಕಟವಾಗಿತ್ತು. ಭಾಮಿನಿ ಸಾಲಿಯವರಿಗೆ ಪ್ರಿಯವಾಗಿದ್ದ ಷಟ್ಪದಿ. ಆಗ ‘ಚಿಗುರೆಲೆ’ಗೆ ಬರೆದ ಐದೇ ವಾಕ್ಯಗಳ ಮುನ್ನುಡಿಯಲ್ಲಿ, ‘ಚಿಗುರೆಲೆಗಳ ನೂತನತೆಯೂ ಮೋಹಕತೆಯೂ ನನ್ನ ಕವಿತೆಗಳಿಗೂ ಇರಲೆಂಬುದಾಗಿ ಪರಮಾತ್ಮನಿಗೆ ಬೇಡಿಕೊಳ್ಳುತ್ತೇನೆ’ ಎಂದು ಬರೆದಿದ್ದರು. ಅವರ ಎರಡನೆಯ ಸಂಗ್ರಹ ‘ಕುಸುಮಾಂಜಲಿ’ಗೆ (1930) ಕಡೆಂಗೋಡ್ಲು ಶಂಕರಭಟ್ಟರು, ‘ಅಭಿಸಾರ’ಕ್ಕೆ (1930) ಮ.ಪ್ರ. ಪೂಜಾರ, ‘ತಿಲಾಂಜಲಿ’ಗೆ (1932) ಶ್ರೀರಂಗ, ‘ಶ್ರೀರಾಮಚರಿತವು’ ಭಾಗ 1(1934) ಮತ್ತು 2(1935)ಕ್ಕೆ ಎ.ಟಿ. ಸಾಸನೂರ; ಹಾಗೂ ಪಿ.ಬಿ. ದೇಸಾಯರು ಸಂಕಲಿಸಿದ್ದ ‘ಚಿತ್ರಸೃಷ್ಟಿ’ಗೆ (1940) ಎಂ. ಗೋವಿಂದ ಪೈ ಮುನ್ನುಡಿ ಬರೆದಿದ್ದಾರೆ. ‘ಸಿಪಾಯಪ್ಪ’, ‘ಐದು ಜಾಣ ಪ್ರಾಣಿಗಳು’ (ಮಕ್ಕಳಕಥೆ); ‘ಬುದ್ಧ-ಜಾತಕಗಳು’; ‘ಸುಕನ್ಯಾ’ ಏಕಾಂಕ ನಾಟಕ; ‘ಜಯ, ಗುರುದೇವ’ ಮತ್ತು ‘ಯದುಪತಿ’ ಕಾದಂಬರಿಗಳು; ಏಳು ಸಂಪುಟಗಳ ‘ಸೊಗಸಿನ ಓದು’ ಪಠ್ಯಪುಸ್ತಕ; ‘ಜೀವನಲೀಲೆ’, ‘ಸ್ಥಿತಪ್ರಜ್ಞ ದರ್ಶನ’ ಮತ್ತು ‘ಹಿಂದುಸ್ತಾನದ ಇತಿಹಾಸ’ ಅನುವಾದಗಳು; ಹಾಗೂ ‘ಅಭಿಸಾರಮ್’, ‘ಸುದಾಮಚರಿತ್ರಮ್’, ‘ಶರಣಾಗತಿಃ’, ‘ಗದ್ಯ ರಾಮಾಯಣಮ್’ ಮುಂತಾದುವು ಸಂಸ್ಕೃತ ಕೃತಿಗಳು. ಇವಲ್ಲದೇ ಕನ್ನಡ ಮತ್ತು ಸಂಸ್ಕೃತದ ಅನೇಕ ಹಸ್ತಪ್ರತಿಗಳನ್ನು ಬಿಟ್ಟುಹೋಗಿದ್ದಾರೆ. ಸಾಲಿಯವರು ಕನ್ನಡವಲ್ಲದೇ ಸಂಸ್ಕೃತ, ಪಾಲಿ, ಮರಾಠಿ, ಹಿಂದಿ, ಗುಜರಾತಿ, ಇಂಗ್ಲಿಷ್, ಜರ್ಮನ್ ಬಲ್ಲವರಾಗಿದ್ದರು. ‘ನವಜೀವನ’ದಲ್ಲಿ ಗಾಂಧೀಜಿ ಬರೆಯುತ್ತಿದ್ದ ಲೇಖನಗಳನ್ನು ಓದಲೆಂದೇ ಗುಜರಾತಿ ಕಲಿತಿದ್ದರು. ಆ ಲೇಖನಗಳನ್ನು ತಕ್ಷಣ ಕನ್ನಡಿಸಿ, ಮಂಗಳವೇಢೆಯವರು ಸಂಪಾದಿಸುತ್ತಿದ್ದ ‘ನವಜೀವನ’ದಲ್ಲಿ ಪ್ರಕಟಣೆಗೆ ಕಳಿಸುತ್ತಿದ್ದರು. ಕೊನೆಗಾಲದಲ್ಲಿ ಸಹ ಅವರು ರಶಿಯನ್ ಭಾಷೆಯನ್ನು ಕಲಿಯುವ ಪ್ರಯತ್ನ ಮಾಡುತ್ತಿದ್ದರು.

ರಾಮದುರ್ಗದಲ್ಲಿ ಜನಿಸಿದ ಸಾಲಿಯವರು ಬಾಲ್ಯದಲ್ಲಿಯೇ ತಂದೆ–ತಾಯಿಯನ್ನು ಕಳೆದುಕೊಂಡು ಅನಾಥರಾಗಿದ್ದರು. ಅಲ್ಲಲ್ಲಿ ಸುತ್ತಾಡುತ್ತಾ ಬಿಜಾಪುರಕ್ಕೆ ಹೋದರು. ವಾರಾನ್ನ ಮಾಡಿಕೊಂಡು, ಓದಿ ಮ್ಯಾಟ್ರಿಕ್ ಪಾಸಾದರು (1907). ಡಂಬಳ ಮಧ್ವರಾಯರು ಮುಂತಾದ ಹಿರಿಯರು ಲಗ್ನ ಮಾಡಿಸಿದರು (1905). ವಿಜಾಪುರದ ಅಂಚೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ, ಬ್ರಿಟಿಷರು ತಿಲಕರನ್ನು ಬಂಧಿಸಿದ ವಾರ್ತೆಯಿಂದ ನಲುಗಿ, ದೇಶಭಕ್ತರಾದ ಸಾಲಿಯವರು ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಮೊದಲಿನಿಂದಲೂ ಗಾಂಧೀವಾದಿಯಾಗಿದ್ದ ಅವರು ಖಾದಿ ಕೇಂದ್ರ ತೆರೆದು, ಜೀವನ ಸಾಗಿಸಲು ಯತ್ನಿಸಿದರು. ನಂತರ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಓದಿ, ಒಂದು ವರ್ಷ (1909-10) ಎಫ್‌ವೈ ಆರ್ಟ್ಸ್ ಪ್ರಥಮ ವರ್ಗದಲ್ಲಿ ಪಾಸಾಗಿ, ಬಡತನದಿಂದಾಗಿ ಕಾಲೇಜು ತೊರೆದರು. ಎರಡು ವರ್ಷ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲ್‌ನಲ್ಲಿ (ತೊರವಿ ಹೈಸ್ಕೂಲ್) ದುಡಿದು, ಮತ್ತೆ ಪುಣೆಗೆ ಹೋಗಿ, ಡೆಕ್ಕನ್

